ಸಿಗುತ್ತಿದ್ದವು. ನಾವು ಸೀಬೆಕಾಯಿ, ನಲ್ಲಿಕಾಯಿ ಅಂತ ಆ ಕಡೆ ಹೊರಟಾಗ ನಮ್ಮಮ್ಮ, 'ಏಯ್ ಮಕ್ಕಳೇ ಗುಮ್ಮನಗೊಳ್ಳದ ಕಡೆಗೆ ಹೋಗ್ಬೇಡಿ. ಗುಮ್ಮ ಬರ್ತದೆ, ಕೂಗ್ತದೆ' ಎನ್ನುತ್ತಿದ್ದರು. ನಮ್ಮಮ್ಮನಿಗೆ ಗುಮ್ಮನನ್ನು ಕಂಡರೆ ಆಗುತ್ತಿರಲಿಲ್ಲ.

ಆದರೆ ನಾನು, ನನ್ನ ತಂಗಿ ಒಮ್ಮೆ ಅಮ್ಮನಿಗೆ ಗೊತ್ತಾಗದಂತೆ ಗುಮ್ಮನನ್ನು ನೋಡಿ ಬಂದೆವು. ಮುಖ ಚಪ್ಪಟ್ಟೆಯಾಗಿ ಕಾಣಿಸುವ ಅದರ ಕಣ್ಣಿನ ಸುತ್ತ ವೃತ್ತಾಕಾರದ ಅಂಚಿರುತ್ತದೆ. ಮೇಲಕ್ಕೆ ಕಿವಿ. ಮೈತುಂಬಾ ಉಬ್ಬಿ ಕಾಣಿಸುವ ಗರಿಗಳು. ರೆಕ್ಕೆ ಬೂದು ಬಣ್ಣ. ಎದೆಯಭಾಗ ಬಿಳಿಯಾಗಿರುತ್ತದೆ. ಕ್ರಿಮಿ-ಕೀಟಗಳನ್ನು ಹಿಡಿದು ತಿನ್ನುತ್ತದೆ. ಇದರ ಕಣ್ಣುಗಳು ಬಹಳ ಸೂಕ್ಷ್ಮ ಎನ್ನುವುದು ಸಣ್ಣ ಮಕ್ಕಳಿಗೂ ಗೊತ್ತಾಗುತ್ತದೆ. ಅದರ ಧ್ವನಿ ಕೆಲವರಿಗೆ ಸ್ವಲ್ಪ ಭಯ ತರಿಸುವಂತಿರಬಹುದು. ನನಗೇನು ಹಾಗೆ ಅನ್ನಿಸಲಿಲ್ಲ. ಗುಮ್ಮ ಹಗಲು- ರಾತ್ರಿ ಆಹಾರ ಹುಡುಕುವ ಹಕ್ಕಿಯಲ್ಲ. ಕುಳಿತಲ್ಲೇ ಕೂರುವ ಅಭ್ಯಾಸ ಇದರದು. ಇದರಿಂದ ಯಾರಿಗೂ ಅಪಾಯವಿಲ್ಲ. ಜನಸಂದಣಿಯಿಂದ ಬಹಳ ದೂರವಿದ್ದು ಇಲ್ಲಿಗೆ ಯಾರೂ ಬರುವುದಿಲ್ಲ ಎಂಬುದನ್ನು ದೃಢಪಡಿಸಿಕೊಂಡು ಅದರ ಪ್ರೀತಿಯ ಹಲಸಿನ ಮರದ ಕೊಂಬೆಯ ಮೇಲೆ ಕುಳಿತು ಕೂಗುತ್ತದೆ. ಗುಮ್ಮ ಕೂಗುವ ಉದ್ದೇಶ ನಾನು ಇಲ್ಲಿ ಇದ್ದೇನೆ ಅಂತ ತನ್ನ ಬಂಧುಗಳಿಗೆ ತಿಳಿಸುವುದಾಗಿದೆ. ಇದು ಕೆಲವರಿಗೆ ಶಕುನದ ಹಕ್ಕಿ. ಮನೆಯಲ್ಲಿ ಇದರ ಫೋಟೊ ಇಟ್ಟು ಪೂಜೆ ಮಾಡುವ ಜನರಿದ್ದಾರೆ ಎಂದು ನಮ್ಮ ಓಂಕಾರಮ್ಮ ಟೀಚರ್ ಹೇಳಿದ ಮೇಲಂತೂ ನನಗೆ ಗುಮ್ಮ ತುಂಬಾ ಇಷ್ಟವಾಗುತ್ತಿತ್ತು. ಆದರೆ ನಮ್ಮಮ್ಮನಿಗೆ ಮಾತ್ರ ಗುಮ್ಮನನ್ನು ಕಂಡರೆ ಸಿಟ್ಟು. ಅವರು ಅದನ್ನು ಅಪಶಕುನ ಎಂದು ತಿಳಿದಿದ್ದರು. ಅದು ಕೂಗಿದ ಕೂಡಲೇ 'ಶನಿ ಏನು ಗ್ರಹಚಾರ ಕಾದಿದೆಯೋ ಯಾರಿಗೆ ಗೊತ್ತು' ಎನ್ನುತ್ತಿದ್ದರು.



ಇದಕ್ಕೆ ಕಾರಣ ಉಂಟು. ಒಮ್ಮೆ ಮಧ್ಯರಾತ್ರಿ ನಮ್ಮಮ್ಮನಿಗೆ ಎಚ್ಚರವಾದಾಗ ಗುಮ್ಮ ಕೂಗುತ್ತಿತ್ತಂತೆ. ಮರುದಿನ ನಮ್ಮಜ್ಜಿ ತೀರಿ ಹೋಗಲಾಗಿ ಅಂದಿನಿಂದ ಅಮ್ಮನಿಗೆ ಗುಮ್ಮನನ್ನು ಕಂಡರೆ ಆಗುವುದಿಲ್ಲ. ರಾತ್ರಿ ವೇಳೆ ಗುಮ್ಮ ಕೂಗುವುದು ಅಪ್ಪಿತಪ್ಪಿ ನಾವದನ್ನು ಕೇಳಿಸಿಕೊಳ್ಳುವುದು ಅಪಶಕುನ ಎಂಬ ಭಾವನೆ ನಮ್ಮಮ್ಮನದು.

ಅವತ್ತೊಂದು ದಿನ ಸಾಯಂಕಾಲ ಚಾವಡಿಯಲ್ಲಿ ಕುಳಿತು ಮನೆ ಮಂದಿಯಲ್ಲಾ ಕಾಫಿ ಕುಡಿಯುತ್ತಿದ್ದಾಗ ಗುಮ್ಮ ಕೂಗತೊಡಗಿತು. ಅಮ್ಮ 'ಥತ್ ಏನ್ ಬಂತಾ ಇದಕ್ಕೆ ದೊಡ್ಡ ರೋಗ, ಅದರ ಮನಿ ಹಾಳಾಗ' ಅಂದರು. ಅಮ್ಮನ ಮಾತು ಕೇಳಿದ ತಂದೆ, 'ಪಾಪದ್ದು ಅದರ ಪಾಡಿಗೆ ಅದು ಕೂಗಿದ್ರೆ ನಿಮ್ಮಮ್ಮಂಗೇನಾಯ್ತು? ಇಲ್ಲಾ ಪೂರಾ ದಡ್ಡರಾಬಕು ಇಲ್ಲಾ ಪೂರ ಬುದ್ದಿವಂತ್ರಾಬಕು. ಎಡಬಿಡಂಗಿಗಳಾದ್ರೆ ಹಿಂಗೆ ಆಗದು. ತಿಳಿವಳಿಕೆ ಇಲ್ಲ ನಿಮ್ಮಮ್ಮಂಗೆ' ಎಂದರು. ನಾವು ಮಕ್ಕಳು ಕಣ್ಣುಕಣ್ಣು ಬಿಡುತ್ತಾ ಅಮ್ಮನನ್ನು, ತಂದೆಯನ್ನು ನೋಡಿದೆವು.

ಆ ಸಮಯಕ್ಕೆ ಸರಿಯಾಗಿ ರಸ್ತೆ ಕಡೆಯಿಂದ 'ಅಮ್ಮಾ ಅಮ್ಮಾ' ಅಂತ ಕರೆದ ಸದ್ದಿಗೆ ನಾವುಗಳು ಕಿವಿಯಾಗಿ ಅತ್ತ ತಿರುಗಿದೆವು. ಇಬ್ಬರು ಮಹಿಳೆಯರು ಉಣುಗಲು ದಾಟಿ ಮನೆ ಕಡೆಗೆ ನಿಧಾನಕ್ಕೆ ನಡೆದು ಬಂದರು. ನಮ್ಮ ಅಮ್ಮ ಅವರಿಬ್ಬರನ್ನು ಪತ್ತೆ ಹಚ್ಚಿ, 'ಏನ್ರಾ ಮರಾಗಿತ್ತೆರಾ ನಿಮಗೇನು ದೇವ್ರು ಜೀವ ಹಾಕಿಲ್ಲೇನಾ? ಈ ಸುರಿ ಮಳೇಲಿ ಯತ್ಲಗೋಗಿದ್ರಿ? ಬಾಣ್ತಿ, ಮೊಗ ಐತೆ ಮಳೆ ಗಾಳಿ ಚಳಿ ಏನ್ರಾ ಇದು, ಹತ್ತು ರೂಪಾಯಿ ಕೊಟ್ಟು ಜೀಪಗೆ ಹೋಗದಲ್ಲೇನ್ರಾ? ಒಲಿಯಡಿಗೆ ಬನ್ನಿ. ಬೆಂಕಿಕಾಯಿಸ್ಗಳಿ. ಮೊಗ ಎಂತದು ಹೆಣ್ಣಾ ಗಂಡಾ?' ಅಂತೆಲ್ಲಾ ಕೇಳಿದ್ದು ಅವರಿಗೆ ಸುಡಸುಡ ಕಾಫಿ ಕೊಟ್ಟಿದ್ದು ಇವತ್ತಿಗೂ ನನ್ನ ಕಣ್ಣಿಗೆ ಕಟ್ಟುತ್ತದೆ.

'ಈ ಮಳೆ ಚಳಿ ಗಾಳಿಗೆ ಹೆದರಿದ್ರೆ ಆಗ್ತದೆನ್ರಿ? ಮೊಗ ಹುಡುಗಿ ಹುಟ್ಯದೆ ಗೌರಮ್ಮ. ನೋಡಿ ಬೆಳ್ಳಗೆ ಮಲ್ಲಗಿ ಹೂವ. ತಗಳಿ ಕರ್ಕಳಿ. ಎಲ್ಡ್ ತಿಂಗಳು ಆತು. ಎಂತದ ಇಂಜೆಕ್ಷನ್ ಹಾಕ್ಸದು ಅಂದ್ರು. ಹಂಗಾಗಿ ಆಸ್ಪತ್ರೆಗೆ ಹ್ವಾದು. ಹ್ಯಂಗಿದರೆ ಅಂತ ಕಂಡಿರಿ, ಡಾಕ್ಟರು ಕೈ ತ್ವಳದು ಮುಟ್ಟಬಕು. ನಾನು ಅತ್ಲಗೆ ಎಲ್ಡು ಕೈನು ಮುಗುದೆ. ಇರ್ಲಿ ಇರ್ಲಿ ಕೂತ್ಗೋಳಿ ಅಂದ್ರು. ಮೊಗ